ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

Web:- www.dom.karnataka.gov.in
20ನೇ ಮಹಡಿ, ವಿ.ವಿ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು-560001.

ಸಂಖ್ಯೆ: ಅಸಂನಿ/ವಿ.ವೇ/ಇಡಿಎನ್/ಸಿಆರ್-03/2021-22

ದಿನಾಂಕ:-03.02.2022

ಗೆ,
ರಿಸಿಸ್ಟ್ರಾರ್/ಡೀನ್
ALL CONCERNED ವಿಶ್ವವಿದ್ಯಾಲಯ

**ವಿಷಯ:-** ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತರ ವಿದ್ಯಾರ್ಥಿಗಳು 2021-22 ನೇ ಸಾಲಿನ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (State Scholarship Portal-SSP) ನಲ್ಲಿ ಮೆಟ್ರಿಕ್-ನಂತರ (ಮೆರಿಟ್-ಕಮ್-ಮೀನ್ಸ್) ವಿದ್ಯಾರ್ಥಿವೇತನದ ಅರ್ಜಿಗಳನ್ನು ಸಲ್ಲಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರ ವಿಧಿಸಿರುವ ನಿಯಮದಂತೆ ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ 2021-22 ನೇ ಸಾಲಿನ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (State Scholarship Portal-SSP) ನ ಮೆಟ್ರಿಕ್-ನಂತರ (ಮೆರಿಟ್-ಕಮ್-ಮೀನ್ಸ್) ವಿದ್ಯಾರ್ಥಿವೇತನದ ಅರ್ಜಿಗಳನ್ನು ಆನಲೈನ್ ಮೂಲಕ ಸಲ್ಲಿಸುವ ಪ್ರಕ್ರಿಯೆ ಶುರುವಾಗಿರುತ್ತದೆ. ಅರ್ಜಿ ಸಲ್ಲಿಸುವ ವಿಧಾನವನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅರ್ಜಿ ಸಲ್ಲಿಸಲು **31.03.2022** ಕೊನೆಯ ದಿನಾಂಕವಾಗಿರುತ್ತದೆ. ಪ್ರತಿ ವರ್ಷದಂತೆ ತಮ್ಮ ಸಹಕಾರ ಮತ್ತು ಕಾರ್ಯವನ್ನು ಅಲ್ಪಸಂಖ್ಯಾತರ ಇಲಾಖೆಯು ಶ್ಲಾಘಿಸುತ್ತದೆ.

ಸರ್ಕಾರದ ಮಾರ್ಗದರ್ಶನದಂತೆ 2021-22 ನೇ ಸಾಲಿನಲ್ಲಿ ರಾಷ್ಟ್ರ ವಿದ್ಯಾರ್ಥಿವೇತನ ಪೋರ್ಟಲ್ (National Scholarship Portal-NSP) ನಲ್ಲಿ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಸಲ್ಲಿಸಿರುವ ಪ್ರತಿ ಮೆಟ್ರಿಕ್ ನಂತರ (ಮೆರಿಟ್-ಕಮ್-ಮೀನ್ಸ್) ಅಲ್ಪಸಂಖ್ಯಾತರ ವಿದ್ಯಾರ್ಥಿಯು ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (State Scholarship Portal-SSP) ನಲ್ಲಿಯೂ ಆನ್‌ಲೈನ್ ಅರ್ಜಿ ಸಲ್ಲಿಸುವುದು ಕಡ್ಡಾಯವಾದ್ದರಿಂದ . ತಮ್ಮ ಅಧೀನದಲ್ಲಿ ಬರುವ ಕಾಲೇಜುಗಳಲ್ಲಿ ರಾಷ್ಟ್ರ ವಿದ್ಯಾರ್ಥಿವೇತನ ಪೋರ್ಟಲ್ (National Scholarship Portal-NSP) ನಡಿ ಸಲ್ಲಿಸಿದ ಅರ್ಜಿಗಳ ಭೌತಿಕ ಗುರಿಯಂತೆ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (State Scholarship Portal-SSP) ನಲ್ಲಿಯೂ ಅರ್ಜಿಗಳೂ ಸಲ್ಲಿಕೆಯಾಗುವಂತೆ ಕ್ರಮವಹಿಸಲು ಪ್ರಾಂಶುಪಾಲರಿಗೆ ಸೂಚಿಸಲು ಕೋರಲಾಗಿದೆ.

ಈ ಪತ್ರದೊಂದಿಗೆ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (State Scholarship Portal-SSP) ನ ಮೆಟ್ರಿಕ್-ನಂತರ ವಿದ್ಯಾರ್ಥಿವೇತನದ USER MANUAL (Step-by- Step Instructions) ಅನ್ನು ಲಗತ್ತಿಸಲಾಗಿದೆ.

ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (SSP) ಪ್ರಕ್ರಿಯೆಯು ಸಮಯಬದ್ಧವಾಗಿರುವುದರಿಂದ ಯಾವುದೇ ಕಾರಣಕ್ಕೂ ವಿಳಂಬ ಮಾಡದೆ ಆದ್ಯತೆಯ ಮೇರೆಗೆ ಪ್ರಕ್ರಿಯೆಯನ್ನು ಪೂರೈಸಲು ಕೋರಲಾಗಿದೆ.

3/2/22
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು

ವಿ.ಸೂ:- ಹೆಚ್ಚಿನ ಮಾಹಿತಿ www.dom.karnataka. gov.in ನಲ್ಲಿ ಲಭ್ಯವಿದೆ.

No. NITK/Academic/2021-22/E4

Date: 15.02.2022

To, -

The Chairman CCC kindly arrange to upload in the Institute Website for the information of the respective students.

Sandhya
सहायक कुलसचिव (शैक्षिक)
Asst. Registrar (Academic)